6	ಶ್ರೀ ಸಾಯಿನಿಧಿ ಮಲ್ಟಿಸ್ಪೆಷಿಯಾಲಿಟಿ ಆಸ್ಪತ್ರೆ, ಹುಮನಾಬಾದ್
7	ಮೇಗೂರ್ ಐ ಕೇರ್ ಸೆಂಟರ್, ಬೀದರ್
8	ತಲವಾಡಿ ಆಸ್ಪತ್ರೆ, ಭಾಲ್ಕಿ
9	ಕೃಷ್ಣಮೂರ್ತಿ ಆಸ್ಪತ್ರೆ, ಬೀದರ್
10	ಶ್ರೀ ಆಸ್ಪತ್ರೆ, ಬೀದರ್
11	ಸಿದ್ದರೋಡ್ ಚಾರಿಟೇಬಲ್ ಆಸ್ಪತ್ರೆ, ಬೀದರ್
12	ಗುರುನಾನಕ್ ಆಸ್ಪತ್ರೆ, ಬೀದರ್

ಆ) 2007–08ನೇ ಸಾಲಿನವರೆಗೆ ಪ್ರಯಾವಿ ಆಸ್ಪತ್ರೆ, ಬೀದರ್ ಇದು ಯಶಸ್ವಿನಿ ಯೋಜನೆಯಡಿಯಲ್ಲಿ ಗುರುತಿಸಲ್ಪಟ್ಟ ಆಸ್ಪತ್ರೆಯ ಪಟ್ಟಿಯಲ್ಲಿ ಸೇರಿರುತ್ತದೆ. ಸದರಿ ಪ್ರಯಾವಿ ಆಸ್ಪತ್ರೆಯಲ್ಲಿ ಯೋಜನೆ ಅನುಷ್ಠಾನ ಸಂದರ್ಭದಲ್ಲಿ ನಡೆಸಿದ ಶಸ್ತ್ರಚಿಕಿತ್ಸೆಗಳಲ್ಲಿ ಅವ್ಯವಹಾರಗಳು ಪತ್ತೆಯಾಗಿರುತ್ತದೆ. ಈ ಆಸ್ಪತ್ರೆಯ ಮಾಲೀಕರು ಡಾ॥ ಅಮರ್ ಯೆರೋಲ್‌ಕರ್ ಆಗಿರುತ್ತಾರೆ.

ಇ) 2008 ಸೆಪ್ಟೆಂಬರ್‌ನಲ್ಲಿ ಪಯಾವಿ ಆಸ್ಪತ್ರೆ ಬೀದರ್ ಇದನ್ನು ಯಶಸ್ವಿನಿ ಯೋಜನೆಯ ಆಸ್ಪತ್ರೆಗಳ ಪಟ್ಟಿಯಿಂದ ಶಾಶ್ವತವಾಗಿ ತೆಗೆದುಹಾಕಲಾಗಿದೆ. ಈ ಜಿಲ್ಲೆಯಲ್ಲಿ ಯಶಸ್ವಿನಿ ಯೋಜನೆಯ ಫಲಾನುಭವಿಗಳ ಸಂಖ್ಯೆ ಹೆಚ್ಚಿರುವುದರಿಂದ ಇನ್ನು ಹೆಚ್ಚಿನ ಸಂಖ್ಯೆಯ ಆಸ್ಪತ್ರೆಗಳನ್ನು ಯಶಸ್ವಿನಿ ಪಟ್ಟಿಯಲ್ಲಿ ಸೇರ್ಪಡೆ ಮಾಡುವ ಬಗ್ಗೆ ಸರ್ಕಾರ ಪರಿಶೀಲಿಸುವುದೇ?

ಯಶಸ್ವಿನಿ ಯೋಜನೆಯು ಸಕಾರ, ಯಶಸ್ವಿನಿ ಟ್ರಸ್ಟ್ ಮತ್ತು ಖಾಸಗಿ ಆಸ್ಪತ್ರೆಗಳ ಸಹಕಾರದಿಂದ ಅನುಷ್ಠಾನಗೊಳ್ಳುತ್ತಿರುವ ಯೋಜನೆಯಾಗಿರುತ್ತದೆ. ಖಾಸಗಿ ಆಸ್ಪತ್ರೆಗಳ ಸ್ವ–ಇಚ್ಛೆಯಿಂದ ಯೋಜನೆಯಡಿಯಲ್ಲಿ ಚಿಕಿತ್ಸೆ ನೀಡಲು ಬಯಸಿ ಟ್ರಸ್ಟಿಗೆ ಪ್ರಸ್ತಾವನೆ ಸಲ್ಲಿಸಿದಲ್ಲಿ ಹಾಗೂ ಆಸ್ಪತ್ರೆಯ ಟ್ರಸ್ಟ್ ನಿಗದಿಪಡಿಸಿರುವ ಶಸ್ತ್ರಚಿಕಿತ್ಸಾ ಮೂಲ ಸೌಕರ್ಯಗಳನ್ನು ಹೊಂದಿದ್ದಲ್ಲಿ. ಇಂತಹ ಆಸ್ಪತ್ರೆಗಳನ್ನು ನೆಟ್‌ವರ್ಕ್ ಆಸ್ಪತ್ರೆಗಳ ಪಟ್ಟಿಗೆ ಸೇರಿಸಲಾಗುವುದು.

ಯಶಸ್ವಿನಿ ಯೋಜನೆ ಪ್ರಗತಿ

185(307) ಶ್ರೀ ಈಶ್ವರ ಭೀಮಣ್ಣ ಖಂಡ್ರೆ:(ಭಾಲ್ಕಿ) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2009–10ನೇ ಸಾಲಿನಲ್ಲಿ ಯಶಸ್ವಿನಿ ಯೋಜನೆಯಡಿಯಲ್ಲಿ ರಾಜ್ಯದ ಎಷ್ಟು ಜನ ರೈತರಿಗೆ ಹೃದ್ರೋಗ ಮುಂತಾದ ಗಂಭೀರ ಖಾಯಿಲೆಗಳಿಂದ ಶಸ್ತ್ರಚಿಕಿತ್ಸೆ ಪಡೆಯಲು ಎಷ್ಟು ಮೊತ್ತದ ಸಹಾಯಧನವನ್ನು ಒದಗಿಸಲಾಗಿತ್ತು? ಈ ಪೈಕಿ ಎಷ್ಟು ಹಣ ಬಿಡುಗಡೆಯಾಗಿದೆ ಮತ್ತು ಎಷ್ಟು ಹಣ ವೆಚ್ಚವಾಗಿದೆ?

ಆ) ಈ ಸಾಲಿನಲ್ಲಿ ರಾಜ್ಯದ ವಿವಿಧ ಜಿಲ್ಲೆಗಳ ಎಷ್ಟು ಸಂಖ್ಯೆಯ ರೈತರು ಯಶಸ್ವಿನಿ ಯೋಜನೆಯ ಲಾಭ ಪಡೆದುಕೊಂಡಿದ್ದಾರೆ? (ಜಿಲ್ಲಾವಾರು ವಿವರಗಳನ್ನು ಒದಗಿಸುವುದು)

ಇ) ಈ ಯೋಜನೆಗೆ ರೈತರು ಹಾಗೂ ಇತರೆ ಯಾವ ವರ್ಗದ ಜನರನ್ನು ಸೇರಿಸಲಾಗಿದೆ? ಇನ್ನೂ ಹೊಸದಾಗಿ ಯಾವ್ಯಾವ ವರ್ಗದ ಜನರನ್ನು ಈ ಯೋಜನೆಯ ವ್ಯಾಪ್ತಿಗೆ ತರಲಾಗುತ್ತಿದೆ?

ಈ) ಪ್ರಸಕ್ತ ಸಾಲಿನಲ್ಲಿ ಈ ಯೋಜನೆಗೆ ಸರ್ಕಾರವು ಒದಗಿಸಿರುವ ಸಹಾಯಧನವೆಷ್ಟು?

ಶ್ರೀ ಲಕ್ಷ್ಮಣ ಸ ಸವದಿ(ಸಹಕಾರ ಸಚಿವರು):

ಅ) 2009–10ನೇ ಸಾಲಿನ ಆಯವ್ಯಯದಲ್ಲಿ ಯಶಸ್ವಿನಿ ಯೋಜನಾ ಅನುಷ್ಠಾನಕ್ಕಾಗಿ ರೂ.40.00 ಕೋಟಿಗಳ ಸಹಾಯ ಧನವನ್ನು ಒದಗಿಸಲಾಗಿತ್ತು. ಇದರಲ್ಲಿ ರೂ.30.00 ಕೋಟಿಗಳನ್ನು ಬಿಡುಗಡೆ ಮಾಡಲಾಗಿದೆ. ಸದರಿ ಸಾಲಿನಲ್ಲಿ ಫಲಾನುಭವಿಗಳಿಂದ ರೂ.41.36 ಕೋಟಿಗಳ ನೋಂದಾವಣೆ ವಂತಿಗೆಯನ್ನು ಸಂಗ್ರಹಿಸಲಾಗಿದೆ.

2009–10ನೇ ಸಾಲಿನಲ್ಲಿ ಯಶಸ್ವಿನಿ ಯೋಜನೆಯಡಿಯಲ್ಲಿ ರಾಜ್ಯದ ಯಶಸ್ವಿನಿ ಯೋಜನೆಯಡಿಯಲ್ಲಿ ರಾಜ್ಯದ 63,058 ಫಲಾನುಭವಿಗಳಿಗೆ ಹೃದ್ರೋಗ ಮುಂತಾದ ಗಂಭೀರ ಖಾಯಿಲೆಗಳಿಗೆ ಶಸ್ತ್ರಚಿಕಿತ್ಸೆಯನ್ನು ನೀಡಲಾಗಿದ್ದು ರೂ.52.12 ಕೋಟಿ ಮೊತ್ತದ ವೆಚ್ಚ ಮಾಡಲಾಗಿದೆ.

ಆ) 2009–10ನೇ ಸಾಲಿನಲ್ಲಿ ಯಶಸ್ವಿನಿ ಯೋಜನೆಯಡಿಯಲ್ಲಿ ರಾಜ್ಯದ ವಿವಿಧ ಜಿಲ್ಲೆಗಳ 63,058 ಫಲಾನುಭವಿಗಳು ಯಶಸ್ವಿನಿ ಯೋಜನೆಯ ಲಾಭ ಪಡೆದುಕೊಂಡಿದ್ದಾರೆ.

ಜಿಲ್ಲಾವಾರು ವಿವರ ಈ ಕೆಳಗಿನಂತಿದೆ:

ಕ್ರ.ಸಂ.	ಜಿಲ್ಲೆಯ ಹೆಸರು	ಸಂಖ್ಯೆ	ಮೊತ್ತ

			ಲಕ್ಷಗಳಲ್ಲಿ
1	ಬಾಗಲಕೋಟೆ	4004	263.72
2	ಬೆಂಗಳೂರು ಗ್ರಾಮಾಂತರ, ರಾಮನಗರ	2692	232.09
3	ಬೆಂಗಳೂರು ನಗರ	1428	126.88
4	ಬೆಳಗಾಂ	4080	348.83
5	ಬಳ್ಳಾರಿ	816	89.77
6	ಬೀದರ್	623	65.81
7	ಬಿಜಾಪುರ	2554	198.08
8	ಚಾಮರಾಜನಗರ	1321	128.93
9	ಚಿಕ್ಕಮಗಳೂರು	1828	157.25
10	ಚಿತ್ರದುರ್ಗ	2554	231.56
11	ದಕ್ಷಿಣ ಕನ್ನಡ	1068	109.79
12	ದಾವಣಗೆರೆ	4215	318.18
13	ಧಾರವಾಡ	1750	121.39
14	ಗದಗ	2349	157.36
15	ಗುಲ್ಬರ್ಗಾ	1712	179.92
16	ಹಾಸನ	3640	288.73
17	ಹಾವೇರಿ	3498	230.09
18	ಕೊಡಗು	511	57.42
19	ಕೋಲಾರ ಮತ್ತು ಚಿಕ್ಕಬಳ್ಳಾಪುರ	1777	175.78
20	ಕೊಪ್ಪಳ	743	59.59
21	ಮಂಡ್ಯ	6953	524.88
22	ಮೈಸೂರು	3018	292.04
23	ರಾಯಚೂರು	1173	109.25

24	ಶಿವಮೊಗ್ಗ	1482	132.79
25	ತುಮಕೂರು	4503	360.84
26	ಉಡುಪಿ	1590	160.38
27	ಉತ್ತರ ಕನ್ನಡ	1176	91.66
	ಒಟ್ಟು	63058	5212.11

ಇ) ಯಶಸ್ವಿನಿ ಯೋಜನೆಯಲ್ಲಿ ಗ್ರಾಮೀಣ ಸಹಕಾರ ಸಂಘಗಳ ರೈತ ಸದಸ್ಯರ ಹಾಗೂ ಆತನ ಕುಟುಂಬದ ಸದಸ್ಯರು, ಗ್ರಾಮೀಣ, ನಗರ/ಪಟ್ಟಣ ಪ್ರದೇಶದಲ್ಲಿನ ಸಹಕಾರಿ ಮೀನುಗಾರರು, ಸಹಕಾರಿ ಬೀಡಿ ಕಾರ್ಮಿಕರು, ಸಹಕಾರಿ ನೇಕಾರರು ಹಾಗೂ ಸಹಕಾರಿ ಸಂಘ/ ಸಹಕಾರಿ ಬ್ಯಾಂಕುಗಳಲ್ಲಿ ಹಣಕಾಸಿನ ವಹಿವಾಟು ಹೊಂದಿರುವ ಸ್ವ–ಸಹಾಯ ಗುಂಪಿನ ಸದಸ್ಯರು ಮತ್ತು ಸ್ತ್ರೀಶಕ್ತಿ ಗುಂಪಿನ ಸದಸ್ಯರನ್ನು ಯೋಜನೆಯ ವ್ಯಾಪ್ತಿಗೆ ತರಲಾಗಿದೆ.

ಈ) ಪ್ರಸಕ್ತ 2010–11ನೇ ಸಾಲಿನ ಆಯವ್ಯಯದಲ್ಲಿ ಯೋಜನೆಯ ಅನುಷ್ಠಾನಕ್ಕಾಗಿ ಸರ್ಕಾರವು ರೂ.40.00 ಕೋಟಿಗಳ ಸಹಾಯಧನವನ್ನು ಒದಗಿಸಿದೆ.

ಕೃಷಿ ಮಾರುಕಟ್ಟೆ ಪ್ರಾಂಗಣ ಅಭಿವೃದ್ಧಿ

186(308) ಶ್ರೀ ಈಶ್ವರ ಭೀಮಣ್ಣ ಖಂಡ್ರೆ: (ಭಾಲ್ಕಿ) ಮಾನ್ಯ ಕೃಷಿ ಮಾರುಕಟ್ಟೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯ ಸರ್ಕಾರವು ರಾಷ್ಟ್ರೀಯ ತೋಟಗಾರಿಕಾ ಮಿಷನ್ ಯೋಜನೆಯಡಿಯಲ್ಲಿ ಬೀದರ್ ಜಿಲ್ಲೆಯ ಯಾವ ಯಾವ ಸ್ಥಳಗಳಲ್ಲಿ ಹಣ್ಣು ಮತ್ತು ತರಕಾರಿ ಮಾರುಕಟ್ಟೆಗಳನ್ನು ಅಭಿವೃದ್ಧಿಪಡಿಸುವ ಯೋಜನೆಯನ್ನು ಕೈಗೆತ್ತಿಕೊಂಡಿದೆ?

ಆ) ಹಾಗಿದ್ದಲ್ಲಿ ಇದಕ್ಕಾಗಿ ಅಗತ್ಯವಿರುವ ಹಣವೆಷ್ಟು

ಇ) ಈ ಯೋಜನೆಯ ಕಾಮಗಾರಿಗಳನ್ನು ಯಾರು ಯಾರಿಗೆ ನೀಡಲಾಗಿದೆ; ಈ ಕಾಮಗಾರಿಗಳನ್ನು ಎಷ್ಟು ಸಮಯದೊಳಗೆ